ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್

ಸಿ.ಸಿ.ನಂ. 3869/2022

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ -01

**ಸಾಕ್ಷಿಗೆ ದಿಃ 03.06.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿಪರಃ ಶ್ರೀ ಹೆಚ್.ಎಂ.ಆರ್ ವಕೀಲರಿಂದಃ**

ನಾನು ಪ್ರಕರಣವನ್ನು ರಾಜಿ ಮಾಡಿಕೊಂಡಿರುತ್ತೇನೆ. 2020 ರಲ್ಲಿ ಬೆಳಿಗ್ಗೆ 7 ಗಂಟೆಯ ಸಮಯದಲ್ಲಿ ಗಲ್ಲಿ ವಿಚಾರವಾಗಿ ಗಲಾಟೆ ಆಗಿದ್ದು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿ. ಚಾಸಾ 3 ಮತ್ತು 4 ಅವರು ಕೇಳಲು ಬಂದಾಗ ಅವರಿಗೂ ಸಹ ಆರೋಪಿತರು ಕೈಯಿಂದ ಹೊಡೆದಿರುತ್ತಾರೆಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿ. ಸದರಿ ವಿಚಾರವಾಗಿ ಪಂಚಾಯಿತಿ ಮಾಡುವುದಾಗಿ ಹೇಳಿದ್ದು ಯಾವುದೇ ಪಂಚಾಯಿತಿ ಆಗದೇ ಇರುವ ಕಾರಣ ನಾನು ಸುಳ್ಳು ದೂರಿನ್ನು ನೀಡಿರುತ್ತೇನೆ ಎಂದರೆ ಸರಿ.

ಅದೇ ದಿನ ಸಂಜೆ ಪೋಲಿಸರು ಯಾವುದೆ ಮಹಜರ ಮಾಡಿಲ್ಲ ನಾನು ಪೊಲಿಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಪೋಲಿಸರು ಕಲ್ಲು ಮತ್ತು ದೊಣ್ಣೆಯನ್ನು ಜಪ್ತು ಮಾಡಿಲ್ಲವೆಂದರೆ ಸರಿ. ನಮ್ಮ ಮನೆಯವರಿಗೂ ಆರೋಪಿತರ ಮನೆಯವರಿಗೂ ಗಲ್ಲಿ ವಿಚಾರವಾಗಿ ಯಾವುದೇ ದ್ವೇಷ ಇರಲಿಲ್ಲವೆಂದರೆ ಸರಿ. ಆರೋಪಿತರು ನನಗೆ ಯಾವುದೇ ರೀತಿಯಿಂದ ಗಲ್ಲಿಯ ವಿಚಾರವಾಗಿ ಬೈದಿಲ್ಲವೆಂದರೆ ಸರಿ. ಆರೋಪಿತರು ನನಗೆ ಮತ್ತು ಚಾಸಾ 2 ರಿಂದ 4 ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲವೆಂದರೆ ಸರಿ. ಯಾವುದೇ ಗಲಾಟೆ ಆಗಿಲ್ಲವೆಂದರೆ ಸರಿ. ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲವೆಂದರೆ ಸರಿ. ಆರೋಪಿತರು ನಮಗೆ ಯಾವುದೇ ಜೀವ ಬೆದರಿಕೆ ಹಾಕಿಲ್ಲವೆಂದರೆ ಸರಿ. ನಾನು ಯಾವುದೇ ಹೇಳಿಕೆ ನೀಡಿಲ್ಲ ಆರೋಪಿತರ ಮೇಲಿನ ದ್ವೇಷದಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿ.ಆರೋಪಿತರಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿ.

**ಮರು ವಿಚಾರಣೆ ಸ.ಸ. ಅ. ಕರಿಂದಃ**

ದಿನಾಂಕ 30.06.2025 ರಂದು ನಾನು ನ್ಯಾಯಾಲಯದ ಮುಂದೆ ನುಡಿದಿರುವ ಸಾಕ್ಷಿ ಸರಿ ಯಿರುವುದಿಲ್ಲ. ನಾನು ಆ ದಿನ ನುಡಿದಿರುವ ಸಾಕ್ಷಿ ಸರಿಯಿದ್ದರೂ ಸಹ ನಾನು ಆರೋಪಿತರೊಂದಿಗೆ ಪ್ರಕರಣವನ್ನು ರಾಜಿ ಮಾಡಿಕೊಂಡಿರುವ ಕಾರಣ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.